ಕರ್ನಾಟಕದ ವಿವಿಧ ಜಿಲ್ಲೆಗಳ ನುಡಿಸೊಬಗನ್ನು ಪರಿಚಯಿಸುತ್ತಿರುವ 'ಚೆನ್ನುಡಿ' ಅಂಕಣಕ್ಕೆ ನೀವೂ ಬರೆಯಬಹುದು. ನಿಮ್ಮೂರಿನ ಭಾಷೆಯ ಸೊಗಡನ್ನು ಒದುಗರೊಂದಿಗೆ ಹಂಚಿಕೊಳ್ಳಬಹುದು. ಲೇಖನ 1000 ಪದಮಿತಿಯಲ್ಲಿ, ನುಡಿ ಅಥವಾ ಯುನಿಕೋಡ್‌ನಲ್ಲಿರಲಿ.
ಇಮೇಲ್– **editorsu@sudha.co.in**

## ಮನದ ಭಾಷೆಯ 'ಚೆನ್ನುಡಿ'

'ನಾವಾಡುವ ನುಡಿಯೇ ಕನ್ನಡ ನುಡಿ' ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ 'ಚೆನ್ನುಡಿ' ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.



ಕೋಟೆ ಕೆರೆಯಲ್ಲಿ ಸೂರ್ಯ ಕಿರಣಗಳು ನೀರನಪ್ಪಿದ ದೃಶ್ಯ ಕಂಡಿದ್ದು ಹೀಗೆ...
ಚಿತ್ರ: ಏಕನಾಥ ಅಗಸಿಮನಿ

ಕಾಣಸ್ತದ. ಇದ ರಸ್ತೆ ಮುಂದ ಠಳಕವಾಡಿ (ಟಿಳಕವಾಡಿ)ಗೆ ಒರ್ತದ. ಆರ್.ಪಿ.ಡಿ., ಗೋಗಟೆ, ಜಿ.ಎಸ್.ಎಸ್ ಕಾಲೇಜುಗೊಳು ಇರೋದ್ರಿಂದ ಇದನ್ನ ಕಾಲೇಜ್ ರೋಡ್ ಅಂತನ ಕರೀತಾರ. ಮುಂದ ಒಂದ ರೋಡು ಸೀದಾ ಗೋವಾಕ್ಕ ಹೋದರ ಇನ್ನೊಂದು ಹೊಳ್ಳಿ ಹರಿಮಂದಿರ, ಅನಗೋಳ ಕಡೆ ಒರ್ತದ. ಹಂಗ ಶಹಾಪುರ, ವಡಗಾಂವ, ಹಿಂದವಾಡಿ ಅನಕೋತ ಇತ್ಲಾ ಕಡೆ ಬೆಳದ್ರ ಅತ್ಲಾಕಡೆ ಮಾಳಮಾರುತಿ ಇದ್ದದ್ದು ಮಹಾಂತೇಶ ನಗರ ಆತು. ಪ್ರಸಿದ್ಧ ಹಿಂಡಲಗಾದ ಗಣಪತಿಗುಡಿ ಇದ್ದದ್ದು ಗಣೇಶಪುರ ಆತು. ಇನ್ನೂ ಎಲ್ಲಾ ದಿಕ್ಕಿನ್ಯಾಗ ಬೆಳಕೋತ ಹೊಂಟದ ನಮ್ಮ ಬೆಳಗಾವಿ.

ಬೆಳಗಾವಿಯನ್ನ 12ನೇ ಶತಮಾನದಾಗ ರಟ್ಟರು ಆಳೋ ಮುಂದ ಕಿಲ್ಲಾ ಕಟ್ಟಿಸಿದ್ರಂತ. ಆವಾಗ ಬೆಳಗಾವಿ ಹೆಸರು 'ವೇಣುಗ್ರಾಮ'. ಅಂದರ, ಬಿದಿರಿನ ಊರು ಅಂತಿತ್ತು. ಆಮ್ಯಾಲೆ ಯಾದವರು, ವಿಜಯನಗರದ ಅರಸರು, ದೆಹಲಿಯ ಖಿಲ್ಜಿಗಳು, ಹೈದರ್‌ಅಲಿ ಮತ್ತು ಪೇಶ್ವೆಗೊಳು ಆಳಿದ್ರು. ಮುಂದ ಇದು ಬ್ರಿಟಿಷರ ಕೈಯಾಗ ಹೋತು. ಗೋವಾಕ್ಕ ಸಮೀಪ ಮತ್ತು ಇಲ್ಲಿ ಹವಾಗುಣ ಛೊಲೊ ಇದ್ದದ್ದಕ್ಕ ಬ್ರಿಟಿಷರು ಇಲ್ಲೆ ದಂಡುಪ್ರದೇಶ ಸ್ಥಾಪಿಸಿದ್ರು. ಸ್ವಾತಂತ್ರ್ಯ ಹೋರಾಟದಾಗನೂ ಬೆಳಗಾವಿ ಹೆಸರು ಮಾಡೇದ. ಬಾಲಗಂಗಾಧರ ಟಿಳಕರು 1916ರಾಗ 'ಹೋಮ್‌ರೂಲ್ ಲೀಗ್' ಸ್ಥಾಪಿಸಿ ಚಳುವಳಿಯನ್ನ ಇಲ್ಲಿಂದನ ಸುರು ಮಾಡಿದ್ರು. 1924ರಾಗ ಬೆಳಗಾವಿ ಒಳಗ ಮಹಾತ್ಮಾ ಗಾಂಧೀಜಿಯವರ ಅಧ್ಯಕ್ಷತಾದಾಗ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ನಡೀತು. ಆವಾಗ ನೀರು ಪೂರೈಸಲಿಕ್ಕೆ ತೋಡಿದ ಭಾವಿಗೆ ಕಾಂಗ್ರೆಸ್ ಭಾವಿ ಅಂತ ಕರೀತಾರ.

ಸ್ವಾತಂತ್ರ್ಯ ಪೂರ್ವದಾಗ ಬಾಂಬೆ ಕರ್ನಾಟಕ ಅಂತ ಕರಿಸಿಗೊಳ್ಳೋ ಭಾಗದಾಗ ಬೆಳಗಾವಿ ಒಂದಾಗಿತ್ತು. ಕರ್ನಾಟಕದಾಗಿದ್ದು ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡ ಊರಾಗಿದ್ದರಿಂದ ಇಲ್ಲೆ ಸಂಸ್ಕೃತಿಗಳ ಮಿಲನ ಆಗಿ ಒಂದ ವಿಶಿಷ್ಟ ಸಂಸ್ಕೃತಿ ರೂಪುಗೊಂಡದ. ಮರಾಠಿಗರು ಗುಡಿ ಪಾಡವಾ ಮಾಡಿದ್ರ ನಾವು ಗುಡಿಪಾಡ್ವ ಅಥವಾ ಯುಗಾದಿ ಮಾಡ್ತೇವಿ. ಆದರ ಎಲ್ಲಾರೂ ಅವತ್ತ ತಿನ್ನೋದು ಬೇವುಬೆಲ್ಲಾನ. ಊಟಕ್ಕ ಹೆಚ್ಚಾಗಿ 'ಹೋಳಿಗಿ ತುಪ್ಪ, ಹೊಡಿ ನಮ್ಮಪ್ಪ'. ಮುಂದ ಬರೋ ಮಾವಿನಹಣ್ಣಿನ ಸೀಝುನ್ ಅಂದ್ರ ಬೆಳಗಾವಿಗರಿಗೆ ಧೊಡ್ಡ ಹಬ್ಬ. ಉಳಿದೆಲ್ಲಾ ತಳಿಗಿಂತ 'ರತ್ನಾಗಿರಿ ಆಪೂಸ್' ಇಲ್ಲೆ ಪ್ರಸಿದ್ಧ. ಇವು ರತ್ನಾಗಿರಿ, ಚಿಪಳೂಣ, ದೇವಗಢ, ಕೊಂಕಣ್ ರೀಜನ್‌ನಿಂದ ಬರಬೇಕ್ರಿ. ಎಪ್ರಿಲ್ ಅಂದ್ರ ರಸ್ತೆದಾಗ, ಅಂಗಡ್ಯಾಗ, ರೇಲ್ವೆ ಸ್ಟೇಷನ್‌ದಾಗ, ಬಸ್‌ಸ್ಟ್ಯಾಂಡಿನ್ಯಾಗ ಎಲ್ಲೆ ನೋಡಿದಲ್ಲೆಲ್ಲಾ ಹಣ್ಣಿನ ಬಾಕ್ಸ, ಬುಟ್ಟಿಗೊಳನ್ನ ಮಂದಿ ಹಿಡಕೊಂಡು ಹೋಗ್ತಿರ್ತಾರ. ಅಲ್ಲಿಂದ ಮೂರು ತಿಂಗಳತನಕಾ ಶೀಕರ್ಣಿ ಒಳಗ ಮುಳುಗಿ ಏಳೋದು ನೋಡ್ರಿ. ಚಪಾತಿ ಶೀಕರ್ಣಿ, ಪುರಿ ಶೀಕರ್ಣಿ, ಹಿಟ್ಟಿನ ಹೋಳಿಗಿ ಶೀಕರ್ಣಿ, ಹೋಳಿಗಿ ಶೀಕರ್ಣಿ... ವಟ್ಟ ಆವಾಗಾವಾಗ ಶೀಕರ್ಣಿ ಆಗಲಿಕ್ಕೆ ಬೇಕು.

ಮಾವಿನ ಹಣ್ಣಿನ ಗದ್ದಲದಾಗ ಚೈತ್ರಮಾಸ ಒರ್ತದರಿ. ಚೈತ್ರಗೌರಿ ಪೂಜಾ ಮಾಡಿದವ್ರ ಮನಿ ಒಳಗ ಅರಿಸಿಣಕುಂಕುಮ, ಪಾನಕ, ಕೋಸಂಬ್ರಿಗಳ ಸಂಭ್ರಮ ಜೋರ ಇರ್ತದ. ಬೆಂಗಳೂರಾಗ ನವರಾತ್ರ್ಯಾಗ ಗೊಂಬಿ ಕೂಡಸೋಹಂಗ ಕೆಲವೊಬ್ಬರು ಗೌರಿ ಸುತ್ತ ಎಲ್ಲಾ ಥಂದದ ಸಾಮಾನಿಟ್ಟು 'ಆರಾಸ' ಮಾಡ್ತಾರ. ಶ್ರಾವಣ ಮಾಸದಾಗ ಮಂಗಳಾಗೌರಿ ಇದ್ದರಂತೂ



ಬೆಳಗಾವಿಯ ಪ್ರಸಿದ್ಧ ಪೈಠಣಿ ಸೀರೆ